ವಿಷಯ:- ವಿಜಾಪುರದಲ್ಲಿ ಅಂಗನವಾಡಿ ಕೇಂದ್ರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 547 (1234)

ಶ್ರೀ ಬಸವನಗೌಡ ರಾ.ಪಾಟೀಲ (ವಿಜಾಪುರ):- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ವಿಜಾಪುರ ನಗರಕ್ಕೆ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಸರಕಾರದವರು ಉದ್ದೇಶಿಸಿರುವರೇ ಹಾಗಿದ್ದಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು.

ಶ್ರೀಮತಿ ವಿಮಲಬಾಯಿ ದೇಶ್‌ಮುಖ್ (ಮಹಿಳ ಮತ್ತು ಮಕ್ಕಳು ಕಲ್ಯಾಣ ರಾಜ್ಯ ಸಚಿವರರು):-

ಅ) ಹೌದು, ಬಿಜಾಪುರ ನಗರಕ್ಕೆ ಒಂದು ಸಮಗ್ರ ಬಾಲವಿಕಾಸ ಯೋಜನೆಯನ್ನು ಮಂಜೂರು ಮಾಡಲು ದಿನಾಂಕ 27-3-96ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿರುತ್ತದೆ. ಕೇಂದ್ರ ಸರ್ಕಾರದಿಂದ ಮಂಜೂರಾತಿ ಬಂದ ನಂತರ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಬಿಜಾಪುರ ನಗರದಲ್ಲಿ ಅನುಷ್ಠಾನಗೊಳ್ಳಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆಯನ್ನು ಜನಸಂಖ್ಯೆಯ ಆಧಾರದ ಮೇಲೆ ನಿರ್ಧರಿಸಲಾಗುವುದು.

ವಿಷಯ:- ರಾಜ್ಯದಲ್ಲಿರುವ ಅಂಗನವಾಡಿ ಕೆಂದ್ರಗಳು ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 548 (854)

ಶ್ರೀ ಕೆ.ಜಯರಾಮ ಶೆಟ್ಟಿ (ಉಳ್ಳಾಲ):- ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳೆಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಸ್ವಂತ ಕಟ್ಟಡಗಳನ್ನು ಹೊಂದಿರುವ ಕೆಂದ್ರಗಳೆಷ್ಟು?

ಕಟ್ಟಡಗಳನ್ನು ಹೊಂದದೇ ಇರುವ ಕೇಂದ್ರಗಳೆಷ್ಟು?

ಇ) 1995-96ರಲ್ಲಿ 1996-97ರಲ್ಲಿ ಎಷ್ಟು ಕೇಂದ್ರಗಳನ್ನು ತೆರೆಯಲಾಗಿದೆ.

ಈ) ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಯಾವ ಯಾವ ಅರ್ಹತೆಗಳಿರಬೇಕು?

ಉ) ಉಳ್ಳಾಲದಲ್ಲಿ ವಿಧಾನ ಸಭೆ ಕ್ಷೇತ್ರದಲ್ಲಿ ಒಟ್ಟು ಎಷ್ಟು ಅಂಗನವಾಡಿ ಕೇಂದ್ರಗಳಿವೆ? ಕಳೆದ 2 ವರ್ಷಗಳಲ್ಲಿ ಎಷ್ಟು ಕೇಂದ್ರಗಳನ್ನು ತೆರೆಯಲಾಯಿತು. ಈ ಕ್ಷೇತ್ರದ ಒಟ್ಟು ಅಂಗನವಾಡಿ ಕೇಂದ್ರಗಳ ಅವಶ್ಯಕತೆ ಎಷ್ಟು?

ಶ್ರೀಮತಿ ವಿಮಲ ದೇಶಮುಖ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):-

ಅ) 39995 ಕೇಂದ್ರಗಳು ಮಂಜೂರಾಗಿವೆ. ಜಿಲ್ಲಾವಾರು ದರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.

ಆ) 1869 ಕೇಂದ್ರಗಳು

1982 ಕೇಂದ್ರಗಳು

ಇ) 1995-96ರಲ್ಲಿ 2189 ಕೇಂದ್ರಗಳು 1996-97ರಲ್ಲಿ 2771 ಕೇಂದ್ರಗಳು ತೆರೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಈ) ಹಳ್ಳಿಯಲ್ಲಿನ ಎಸ್‌ಸಿ : ಎಸ್‌ಟಿ ಜನಸಂಖ್ಯೆಯ ಸಾಂದ್ರತೆ ಸಾಮಾಜಿಕ, ವೈದ್ಯ ಹಾಗೂ ಪೌಷ್ಟಿಕ ದೃಷ್ಟಿಯಿಂದ ಹಿಂದುಳಿದರುವಿಕೆ ಬರಗಾಲ ಪೀಡಿತ : ಪ್ರವಾಹ ಪೀಡಿತ ಪ್ರದೇಶಗಳು ಹಾಗೂ ಹಳ್ಳಿಯಲ್ಲಿ ಕನಿಷ್ಟ 850-750 ಜನಸಂಖ್ಯೆಯಾದರೂ ಲಭ್ಯವಿರಬೇಕು.

ಉ) 95 ಕೇಂದ್ರಗಳಿವೆ

95 ಕೇಂದ್ರಗಳನ್ನು ತೆರೆಯಲಾಯಿತು

139 ಕೇಂದ್ರಗಳ ಅವಕ್ಯಶತೆ ಇದೆ.

ಅನುಬಂಧ - 1

ಜಿಲ್ಲಾವಾರು ಮಂಜೂರಾಗಿರುವ ಅಂಗನವಾಡಿ ಕೇಂದ್ರಗಳ ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆ ಹೆಸರು	ಮಂಜೂರಾದ ಅಂಗನವಾಡಿ ಕೇಂದ್ರಗಳು
1.	ಬೆಂಗಳೂರು ನಗರ	1192
2.	ಬೆಂಗಳೂರು (ಗ್ರಾ)	1891
3.	ಚಿತ್ರದುರ್ಗ	1963
4.	ಕೋಲಾರ	2331
5.	ಶಿವಮೊಗ್ಗ	1757
6.	ತುಮಕೂರು	2337
7.	ಮೈಸೂರು	2985

8.	ಚಿಕ್ಕಮಗಳೂರು	1213
9.	ದಕ್ಷಿಣ ಕನ್ನಡ	2327
10.	ಹಾಸನ	1594
11.	ಕೊಡಗು	692
12.	ಮಂಡ್ಯ	1655
13.	ಬೆಳಗಾಂ	3673
14.	ಬಿಜಾಪುರ	2667
15.	ಧಾರವಾಡ	2881
16.	ಉತ್ತರ ಕನ್ನಡ	1202
17.	ಗುಲ್ಬರ್ಗ	2250
18.	ಬಳ್ಳಾರಿ	1573
19.	ಬೀದರ್	1151
20.	ರಾಯಚೂರು	2201
	ಒಟ್ಟು	39985

ವಿಷಯ :- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತೀವೃಷ್ಟಿಯಿಂದ ಆದ ತೊಂದರೆಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 549 (954)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೂನ್ ತಿಂಗಳಲ್ಲಿ ಉಂಟಾದ ಸುಂಟರಗಾಳಿ ಮತ್ತು ಭಾರಿ ಮಳೆಯಿಂದ ವಿದ್ಯುತ್ ತಂತಿ ತುಂಡಿನಿಂದ ವಿದ್ಯುತ್ ಹರಿದು ಮೃತರಾದವರ ಹಾಗೂ ಹಾನಿಯಾಗಿ ಮನೆ ಕಳೆದುಕೊಂಡವರ ಸಂಖ್ಯೆ ಎಷ್ಟು?

ಆ) ಈ ಪೈಕಿ ಉಳ್ಳಾಲ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಹಾನಿ ಆಗಿದೆ?

ಇ) ಸರ್ಕಾರ ಇವರಿಗೆ ಏನೇನು ಪರಿಹಾರ ಒದಗಿಸಿದೆ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

ಅ) ವಿದ್ಯುತ್ ತಂತಿ ಸ್ಪರ್ಷದಿಂದ 3 ಜನರು ಮೃತಪಟ್ಟಿರುತ್ತಾರೆ. 48 ಮನೆಗಳು